ಸಕಾಲಕ್ಕೆ ಜ್ಞಾಪಕ ಬರುತ್ತಿತ್ತು. ಮಾರನೇ ದಿನ ಯಾರಾದ್ರೂ ದೋಣಿ ಬಿಟ್ರ್ಯಾ ಅಂತ ಕೇಳಿದ್ರೆ ಇಲ್ಲ ಅನ್ನೋಕ್ಕೆ ಎಂಥ ಅವಮಾನ!

ಪ್ರೌಢಶಾಲೆಗೆ ಕಾಲಿಟ್ಟ ನನಗೆ ಅಪ್ಪ ಸೈಕಲ್ ತೆಗೆಸಿಕೊಟ್ಟರು. ಮನೆಯಿಂದ ಸುಮಾರು ಒಂದೂವರೆ ಕಿ.ಮೀನಷ್ಟು ದೂರವಿದ್ದ ಭಗಿನಿ ಸೇವಾಸಮಾಜ ಕೂಗಳತೆಯ ಶಾಲೆಯಲ್ಲಿ ಓದಿದ್ದ ನಮಗೆ ದಿಲ್ಲಿಗೆ ಹೋದಷ್ಟೇ ದೂರ ಎನಿಸುತ್ತಿತ್ತು! ಮಳೆಗಾಲದ ಎರಡು ತಿಂಗಳು ಮಾತ್ರ ನನ್ನ ಸೈಕಲ್ ಮಹಡಿಮೆಟ್ಟಿಲ ಕೊಠಡಿಯಲ್ಲಿ ಬೆಚ್ಚನೆ ಆಶ್ರಯ ಪಡೆಯುತ್ತಿತ್ತು. ಪಾಪ! ಅದಕ್ಕೂ ವಿಶ್ರಾಂತಿ ಬೇಡ್ವೇ? ಏಕೆಂದು ಪ್ರಶ್ನಿಸಿದ ಹಿರಿಯರಿಗೆ ಉತ್ತರ ಸಿದ್ಧವಾಗಿರುತ್ತಿತ್ತು. 'ಕೊಡೆ ಹಿಡಿದು ಸೈಕಲ್ ಓಡಿಸೋಕ್ಕೆ ಸಾಧ್ಯನಾ ಅಜ್ಜಿ? ಅದಕ್ಕಿಂತ ನಡೆದು ಹೋದ್ರೆ ವಾಸಿ ಅಲ್ವಾ ತಾತ? ರಸ್ತೆಲೆಲ್ಲಾ ನೀರು ನಿಂತಿರುತ್ತೆ ಅಮ್ಮ... ಜಾರಿ ಬಿದ್ರೆ?' ಎನ್ನುವ ವಾದ ಮುಂದಿಟ್ಟಾಗ ಎಲ್ಲರೂ ಮೌನಸಮ್ಮತಿ ಸೂಚಿಸುತ್ತಿದ್ದರು.

ಪದವಿಪೂರ್ವ ಹಾಗೂ ಪದವಿ ಕಾಲೇಜಿಗೆ ಬರುವಷ್ಟರಲ್ಲಿ ಮಳೆಗಾಲದ ಮತ್ತಷ್ಟು ಆಯಾಮಗಳನ್ನು ಗಮನಿಸಿ ಆನಂದಿಸಲಾರಂಭಿಸಿದ್ದೆ. ಮಳೆ ಬೀಳುತ್ತಿದ್ದರೆ ಮರಗಿಡಗಳು ನಕ್ಕುನಲಿಯುವಂತೆ ಭಾಸವಾಗುತ್ತಿತ್ತು. ನಾವೆಷ್ಟು ನೀರು ಹಾಕಿದರೂ ಮಳೆನೀರು ಇವುಗಳಿಗೆ ಕೊಡುವ ಸಂತೃಪ್ತಿಯೇ ಬೇರೆ ಅನಿಸುತ್ತಿತ್ತು. ನಮ್ಮ ಮನೆಯಲ್ಲಿದ್ದ 300ಕ್ಕೂ ಹೆಚ್ಚು ಹೂಕುಂಡಗಳು, ವಿವಿಧ ಕ್ರೋಟಾನ್ ಗಿಡಗಳು, ತೆಂಗಿನಮರ ಹಾಗೂ ನಿಂಬೆಹಣ್ಣಿನ ಪಾತಿಗಳು ಮಳೆಯ ನೀರಿನಿಂದ ತುಂಬಿತುಳುಕುತ್ತಿದ್ದರೆ ಏನೋ ಒಂದು ವಿಧವಾದ ಸಂತೋಷ! ಮನೆಯ ತೋಟದ ಕಾಲುದಾರಿಯಲ್ಲಿ ಹಾದು ಬರುವಾಗ ಎಲೆಗಳ, ಹೂಗಳ ಮೇಲಿರುವ ನೀರಿನ ಹನಿಗಳನ್ನು ಮುಟ್ಟಿ ಆನಂದಿಸುತ್ತಿದ್ದೆ. ಕ್ರೋಟಾನ್ ಗಿಡ ತಗುಲಿ ನೀರಿನ ಸಿಂಚನವಾದರೆ ಹಿತವೆನಿಸುತ್ತಿತ್ತು. ಕಪ್ಪೆಗಳ ವಟರ್ ಗುಡುವಿಕೆ, ಮಣ್ಣಿನ ವಾಸನೆ ಮನಸ್ಸಿಗೆ ಉಲ್ಲಾಸ ತರುತ್ತಿತ್ತು. ಎಲೆಗಳ ಅಲುಗಾಟ ಮಳೆಗಾಲದ ಹಸಿರನ್ನು ನೋಡಿದರೆ ಮನಸ್ಸು ಹಾಯೆನಿಸುತ್ತಿತ್ತು. ನಮ್ಮ ಮನೆ ಬಾವಿ ಪಕ್ಕದ ನೆಲದಲ್ಲಿ ಹಸಿರು ಪಾಚಿ ಕಂಡರೆ ಓಹೋ! ಈ ಸರಿ ಮಳೆಗಾಲ ನ್ಯಾಯ ಒದಗಿಸಿದೆ ಪರವಾಗಿಲ್ಲ ಎಂದು ಸಮಾಧಾನ ಆಗುತ್ತಿತ್ತು. ಮಳೆಗೆ ಮನುಷ್ಯರ ಹಾಗೂ ಪ್ರಾಣಿಗಳ ವರ್ತನೆ ಹೇಗಿರುತ್ತದೆ ಎಂಬುದನ್ನು ಕುತೂಹಲದಿಂದ ಗಮನಿಸುತ್ತಿದ್ದೆ. ಎಮ್ಮೆ ಹಸುಗಳು ಕಿಂಚಿತ್ತೂ ಅವಸರ ತೋರದೆ ನಿಧಾನವಾಗಿ ನಡೆಯುವುದನ್ನು ನೋಡಿ ಅಚ್ಚರಿಯಾಗುತ್ತಿತ್ತು. ಪಾಪ! ಇವಕ್ಕೆ ಏನೂ ಅನಿಸೋಲ್ವ? ಅದಕ್ಕೋ ಏನೋ ಅಜ್ಜಿ ಕೆಲವು ಬಾರಿ ತಾತನಿಗೆ ಎಮ್ಮೆಚರ್ಮ ಅನ್ನೋದು ಎನಿಸಿ ನಗು ಬರುತ್ತಿತ್ತು. ಮಳೆಯನ್ನು ಶಪಿಸುತ್ತಾ ಹೆಜ್ಜೆ ಹಾಕುವ ಮನುಷ್ಯರನ್ನು ನೋಡಿ ಮಳೆ ಆನಂದಿಸುವ ಯೋಗ ಇವರಿಗೆ ಇಲ್ವಲ್ಲಾ ಎಂದು ಮರುಕ ಹುಟ್ಟುತ್ತಿತ್ತು. ಸ್ವಲ್ಪ ಒದ್ದೆ ಆದರೆ ಇವರ ಗಂಟೇನು ಹೋಗೋದು? ಅದಕ್ಕೆ ಶಪಿಸಬೇಕೇ? ಎಂದು ಸಿಟ್ಟು ಕೂಡಾ ಬರುತ್ತಿತ್ತು.

ಮಳೆಗಾಲದಲ್ಲಿ ನಮ್ಮ ಬಾವಿನೀರು ಕೆಲವೊಮ್ಮೆ ದಡದಲ್ಲಿ ನಿಂತು ತುಂಬಿಕೊಳ್ಳುವಷ್ಟು ಮೇಲೆ ಬರುತ್ತಿತ್ತು. ಮೃಗಾಲಯಕ್ಕೆ ರವಾನೆಯಾಗುವ ಮುನ್ನ ಸ್ವಲ್ಪಕಾಲ ನಮ್ಮ ಅತಿಥಿಯಾಗಿದ್ದ ಪುಟ್ಟ ಆಮೆಮರಿಯೊಂದು ಆ ಸಮಯದಲ್ಲಿ ನೀರ ಮೇಲೆ ತೇಲಿಕೊಂಡು ಬರುತ್ತಿತ್ತು. ಅದನ್ನು ನಿರೀಕ್ಷಿಸಿ ದಿನಾ ಬಾವಿಯನ್ನು ಇಣುಕಿ ಹಾಕುತ್ತಿದ್ದೆ. ಹಾಗೆ ಬಾವಿ ತುಂಬಿದಾಗ ಅಮ್ಮ 'ಗಂಗೇಚ ಯಮುನೇಚೈವ' ಎಂದು ಹೇಳುತ್ತಾ ಬಾವಿಗೆ ಪೂಜೆ ಮಾಡುತ್ತಿದ್ದರೆ ಪೂಜಾಪರಿಕರಗಳನ್ನು ಇಟ್ಟುಕೊಂಡು ನಿಂತಿರುತ್ತಿದ್ದ ನಮಗೆ ಅಚ್ಚರಿಯಾಗುತ್ತಿತ್ತು. ಕಾವೇರಿ ಅಂದ್ರೆ ಒಪ್ಕೋಬೋದು. ಆದ್ರೆ ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದೆ, ಸಿಂಧು ಅಂತೆಲ್ಲ ಹೇಳೊದು ಸ್ವಲ್ಪ ಅತಿಶಯೋಕ್ತಿ ಅಲ್ವಾ? ಎನ್ನುವ ನನ್ನ ಪ್ರಶ್ನೆಗೆ ಅಪ್ಪ, ನದಿಮೂಲ ಎಲ್ಲಿರುತ್ತೆ ಗೊತ್ತಿರಲ್ಲ ತಾಯೀ... ಈ ಅಂತರ್ಜಲದಲ್ಲಿ ಆ ನದಿಗಳ ಅಂಶ ಸೇರಿದ್ದರೆ ಆಶ್ಚರ್ಯ ಏನಿಲ್ಲ ಎಂದು ವಿವರಣೆ ನೀಡುತ್ತಿದ್ದರು. ಆ